# ನಟನೆಯ ಒಲವಿನ ಪೂಜಾ ಫಲ!

■ ಪದ್ಮನಾಭ ಭಟ್

**ಈಗಷ್ಟೇ ನಟನಾಜಗತ್ತನ್ನು ಪ್ರವೇಶಿಸುತ್ತಿರುವ ಪೂಜಾ ಜನಾರ್ದನ್ ಅವರಿಗೆ, 'ಕನ್ನಡದಲ್ಲಿಯೇ ಸಾಧನೆ ಮಾಡಬೇಕು' ಎಂಬ ಹೆಬ್ಬಯಕೆ.**



'ಸಿನಿಮಾಗೆ ಭಾಷೆಯ ಹಂಗಿಲ್ಲ ಎನ್ನುವುದು ನಿಜ. ಆದರೆ ನಮ್ಮ ನೆಲದಲ್ಲಿ, ನಮ್ಮ ಜನರಿಂದ ಸಿಗುವ ಪ್ರೀತಿ ಬೇರೆ ಕಡೆಗೆ ಸಿಗಲು ಸಾಧ್ಯವೇ? ಬೇರೆಡೆ ಹೋಗಿ ಎಷ್ಟೇ ಸಾಧನೆ ಮಾಡಿದರೂ, ಕನ್ನಡದ ನೆಲದಲ್ಲಿ ಮಾಡಿದ ಸಾಧನೆಗೆ ಸಮವಲ್ಲ. ಕನ್ನಡಿಗರ ಪ್ರೀತಿಯ ಮುಂದೆ ಬೇರೆ ಯಾವುದೂ ಮುಖ್ಯವಲ್ಲ. ಹಾಗಾಗಿಯೇ ನಾನು ಕನ್ನಡದಲ್ಲಿಯೇ ನನ್ನ ನಟನಾಜೀವನವನ್ನು ಶುರುಮಾಡಬೇಕು ಎಂದು ನಿರ್ಧಾರ ಮಾಡಿದ್ದೇನೆ.' ನೀಳಕಾಯದ ಚೆಂದುಳ್ಳಿ ಹುಡುಗಿ ಪೂಜಾ ಜನಾರ್ದನ್ ಅವರ ಮಾತಿನಲ್ಲಿ ಹಾಸನದ ಸೊಗಡು ಮತ್ತು ಇಂಗ್ಲಿಷಿನ ಸ್ಲ್ಯಾಂಗು ಎರಡೂ ಮಿಶ್ರಣವಾಗಿತ್ತು. ಅದರ ವಿಚಿತ್ರ ಮಿಶ್ರಣದ ಒಗರನ್ನು ಮರೆಸುವಷ್ಟು ಕನ್ನಡಪ್ರೀತಿ ಅವರ ಧ್ವನಿಯಲ್ಲಿ ಸೂಸುತ್ತಿತ್ತು.

ಹಾಸನದ ಈ ಹುಡುಗಿಗೆ ಬಾಲ್ಯದಿಂದಲೂ ಸಿನಿಮಾ, ನಟನೆ ಎಂದರೆ ಇಷ್ಟ. ಮಾಡೆಲಿಂಗ್ ಲೋಕದ ಬಗೆಗೆ ಬೆರಗು. ನಟಿಯಾಗಬೇಕು ಎಂಬ ಕನಸನ್ನು ಮನಸಲ್ಲಿಟ್ಟುಕೊಂಡೇ ಓದಿನಲ್ಲಿ ತೊಡಗಿಕೊಂಡರು. ಉನ್ನತ ಶಿಕ್ಷಣಕ್ಕಾಗಿ ದುಬೈಗೆ ಹೋಗಿದ್ದಾಗ ಮಾಡೆಲಿಂಗ್ ಲೋಕದ ಒಡನಾಟ ಸಿಕ್ಕಿತು. ಕ್ಯಾಮೆರಾ ಎದುರಿಗೆ ಬಳುಕುವುದು ರೂಢಿಯಾಗುತ್ತಿರುವ ಹಾಗೆಯೇ ಹುಟ್ಟಿದ ಊರಿನ ಹಂಬಲವೂ ಕಾಡಲು ಶುರುವಾಯ್ತು. ಶಿಕ್ಷಣವನ್ನು ಮುಗಿಸಿ ಈಗ ಬೆಂಗಳೂರಿಗೆ ಮರಳಿರುವ ಪೂಜಾಗೆ ತಾನು ಏನೇ ಸಾಧನೆ ಮಾಡಿದರೂ ಇಲ್ಲಿಯೇ ಎಂದು ಅನಿಸಿಬಿಟ್ಟಿದೆ.

'ಈಗಿನ್ನೂ ನಾನು ಸಿನಿಮಾರಂಗಕ್ಕೆ ಪ್ರವೇಶ ಮಾಡುತ್ತಿದ್ದೇನೆ. ಆದರೆ ಸಿನಿಮಾನೇ ನನ್ನ ಜೀವನ. ಕನ್ನಡದಲ್ಲಿಯೇ ಸಾಧನೆ ಮಾಡಬೇಕು ಎನ್ನುವುದು ನನ್ನ ಬದುಕಿನ ಗೋಲ್' ಎನ್ನುತ್ತಾರೆ ಪೂಜಾ.

ದುಬೈನಲ್ಲಿ ಇದ್ದಾಗಲೇ ಪೂಜಾಗೆ ಕನ್ನಡ ಮತ್ತು ತೆಲುಗು ಚಿತ್ರರಂಗದಿಂದ ಅವಕಾಶಗಳು ಬಂದಿದ್ದವಂತೆ. ಕನ್ನಡದಲ್ಲಿ ಒಂದು ಸಿನಿಮಾಗೆ ನಾಯಕಿಯಾಗಿಯೂ ಅವರು ಆಯ್ಕೆಯಾಗಿದ್ದರು. ಆದರೆ ಆ ಚಿತ್ರ ಕೊರೊನಾ ಕಾರಣಕ್ಕೆ ನಿಲುಗಡೆಯಲ್ಲಿದೆ. ಅದೇ ಸಮಯದಲ್ಲಿ 'ಒಮಿನಿ' ಸಿನಿಮಾದ ನಿರ್ದೇಶಕ ಮಂಜು ಹೆದ್ದೂರ ಅವರು ಪೂಜಾ ಅವರನ್ನು ತಮ್ಮ ಸಿನಿಮಾದಲ್ಲಿ ವಿಶೇಷ ಹಾಡೊಂದಕ್ಕೆ ನರ್ತಿಸುವಂತೆ ಕೇಳಿಕೊಂಡಿದ್ದಾರೆ. ಅವರ ಕೋರಿಕೆಯನ್ನು ಒಪ್ಪಿಕೊಂಡು ತಮ್ಮ ಮೊದಲ ಪ್ರಯತ್ನದಲ್ಲಿಯೇ 'ಗೆಸ್ಟ್ ಅಪಿಯರೆನ್ಸ್' ಮಾಡಿರುವ ಅವರಿಗೆ ಆ ಹಾಡೂ ತುಂಬ ಖುಷಿ ಕೊಟ್ಟಿದೆ.

'ನಾಯಕ ತುಂಬ ತೊಂದರೆಯಲ್ಲಿರುತ್ತಾನೆ. ಆ ತೊಂದರೆಗಳನ್ನು ನನ್ನ ಬಳಿ ಹೇಳಿಕೊಳ್ಳುವ ರೀತಿಯ ಹಾಡದು. ಹಾಡು ತುಂಬಾ ಚೆನ್ನಾಗಿ ಬಂದಿದೆ. ಈಗ ಇಡೀ ಜಗತ್ತೇ ಪ್ರಾಬ್ಲಮ್‌ನಲ್ಲಿದೆ. ನಮ್ಮ ಹಾಡೂ ನಾಯಕ ಪ್ರಾಬ್ಲಮ್ ಕುರಿತಾಗಿಯೇ ಇದೆ' ಎಂದು ನಗುತ್ತಾರೆ ಅವರು.

ದುಬೈನಲ್ಲಿ ನಟನೆಯ ಕೋರ್ಸ್‌ಗೆ ಸೇರಿದ್ದ ಪೂಜಾ ಅದನ್ನು ಅರ್ಧದಲ್ಲಿಯೇ ಬಿಟ್ಟು ಬೆಂಗಳೂರಿಗೆ ಬಂದಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಕೆಲಸ ಮಾಡುತ್ತ, ಇಲ್ಲಿನ ಅಗತ್ಯಗಳಿಗೆ ತಕ್ಕಂಥ ನಟನಾಕೌಶಲ್ಯಗಳನ್ನು ಕಲಿಯಬೇಕು ಎಂಬುದು ಅವರ ಉದ್ದೇಶ.

ಲಾಕ್‌ಡೌನ್ ಸಂದರ್ಭದಲ್ಲಿ ಯಾವ ಸಿನಿಮಾ ಕೆಲಸಗಳೂ ನಡೆಯದೆ ಇರುವಾಗ, ಪೂಜಾ ತಮ್ಮನ್ನು ತಾವು ನಟನಾಪ್ರಯಾಣಕ್ಕೆ ಸಜ್ಜುಗೊಳಿಸಿಕೊಳ್ಳುತ್ತಿದ್ದಾರೆ. ದಿನಕ್ಕೆ ಕನಿಷ್ಠ ಮೂರು ಗಂಟೆ ವರ್ಕೌಟ್ ಮಾಡುತ್ತಾರೆ. ಉಳಿದ ಸಮಯವನ್ನು ನಟನಾ ತರಬೇತಿ, ನೃತ್ಯ ತರಬೇತಿಗಳಿಗೆ ಮೀಸಲಿರಿಸಿದ್ದಾರೆ. 'ನನಗೆ ಸಿನಿಮಾವೇ ಎಲ್ಲ. ಹಾಗಾಗಿ ನನ್ನ ಇಡೀ ದಿನಚರಿಯನ್ನು ಸಿನಿಮಾಸಿದ್ಧತೆಗೇ ಮೀಸಲಿಟ್ಟಿದ್ದೇನೆ' ಎನ್ನುತ್ತಾರೆ ಅವರು.

'ನಾಯಕಿಯಾಗಿ ಚಿತ್ರರಂಗದಲ್ಲಿ ನೆಲೆಯೂರಬೇಕು. ನಾಯಕಿಪ್ರಧಾನ ಸಿನಿಮಾಗಳಲ್ಲಿ ನಟಿಸಬೇಕು' ಎನ್ನುವುದು ಪೂಜಾ ಕನಸು. ಗ್ಲ್ಯಾಮರ್ ಎನ್ನುವುದು ವರ್ಜ್ಯವೇನೂ ಅಲ್ಲ ಎನ್ನುವ ಪೂಜಾ, ನಟನೆಯೇ ಎಲ್ಲಕ್ಕಿಂತ ಹೆಚ್ಚು ಮುಖ್ಯ ಎನ್ನಲು ಮರೆಯುವುದಿಲ್ಲ.

'ನಟಿಗೆ ಗ್ಲ್ಯಾಮರ್ ಕೂಡ ಬೇಕು. ಆದರೆ ಅದಕ್ಕೆ ಎರಡನೇ ಸ್ಥಾನ. ನನ್ನ ಪ್ರಕಾರ ನಟನೆಯೇ ಎಲ್ಲಕ್ಕಿಂತ ಮುಖ್ಯ. ಹೀಗಾಗಿ ತೆರೆಯ ಮೇಲೆ ಗ್ಲ್ಯಾಮರ್ ಆಗಿ ಕಾಣಿಸಿಕೊಳ್ಳದ ಹಳ್ಳಿ ಹುಡುಗಿಯ ಪಾತ್ರವಾಗಲಿ, ಅಥವಾ ಇನ್ಯಾವುದೇ ಡಿ ಗ್ಲ್ಯಾಮರ್ ಪಾತ್ರವಾಗಲಿ ಒಪ್ಪಿಕೊಳ್ಳಲು ನಾನು ಹಿಂಜರಿಯುವುದಿಲ್ಲ. ಪಾತ್ರಕ್ಕೆ ಅಗತ್ಯವಿದ್ದರೆ ಗ್ಲ್ಯಾಮರಸ್ ಆಗಿಯೂ ಕಾಣಿಸಿಕೊಳ್ಳುತ್ತೇನೆ. ನಮಗೆ ನಟನೆಯ ಮೇಲೆ, ಅದನ್ನು ನಿಭಾಯಿಸುವ ನಮ್ಮ ಶಕ್ತಿಯ ಮೇಲೆ ನಂಬಿಕೆ ಇರಬೇಕು' ಎನ್ನುವುದು ಅವರ ನಿಲುವು. ■